# Telephone Conversation between PM and Prime Minister of Sweden

April 07, 2020

---

## ಪ್ರಧಾನ ಮಂತ್ರಿ ಮತ್ತು ಸ್ವೀಡನ್‌ನ ಪ್ರಧಾನ ಮಂತ್ರಿ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 07, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರು. ಹೆಚ್. ಇ. ಸ್ಟೀಫನ್ ಲೋಫ್ವೆನ್, ಸ್ವೀಡನ್‌ನ ಪ್ರಧಾನ ಮಂತ್ರಿಯೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದರು.

ಹೆಚ್ಚುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗ ಮತ್ತು ಅದರ ಆರೋಗ್ಯ ಹಾಗೂ ಆರ್ಥಿಕ ಪರಿಣಾಮಗಳನ್ನು ನಿಯಂತ್ರಿಸಲು ಆಯಾ ದೇಶಗಳಲ್ಲಿ ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು.

ಭಾರತೀಯ ಮತ್ತು ಸ್ವೀಡಿಷ್ ಸಂಶೋಧಕರ ಮತ್ತು ವಿಜ್ಞಾನಿಗಳ ನಡುವಿನ ಸಹಯೋಗ ಮತ್ತು ದತ್ತಾಂಶ ಹಂಚಿಕೆಯ ಸಾಮರ್ಥ್ಯವನ್ನು ಇಬ್ಬರು ನಾಯಕರು ಒಪ್ಪಿಕೊಂಡರು, ಇದು ಕೋವಿಡ್-19 ರ ವಿರುದ್ಧದ ಜಾಗತಿಕ ಪ್ರಯತ್ನಗಳಿಗೆ ಸಹಕಾರಿಯಾಗಿದೆ.

ಪ್ರಯಾಣದ ನಿರ್ಬಂಧಗಳಿಂದಾಗಿ ಸಿಕ್ಕಿಹಾಕಿಕೊಂಡಿರುವ ಪರಸ್ಪರರ ನಾಗರಿಕರಿಗೆ ಅಗತ್ಯವಾದ ಸೌಲಭ್ಯ ಮತ್ತು ಸಹಾಯವನ್ನು ಒದಗಿಸುವುದಾಗಿ ಇಬ್ಬರು ನಾಯಕರು ಭರವಸೆ ನೀಡಿದರು.

ಕೋವಿಡ್-19 ರ ವಿರುದ್ಧ ಹೋರಾಡಲು ವೈದ್ಯಕೀಯ ಸಾಮಗ್ರಿಗಳ ಲಭ್ಯತೆಯನ್ನು ಉತ್ತಮಗೊಳಿಸಲು ತಮ್ಮ ಅಧಿಕಾರಿಗಳು ಸಂಪರ್ಕದಲ್ಲಿರುತ್ತಾರೆ ಎಂದು ಅವರು ಒಪ್ಪಿಕೊಂಡರು.

**ನವ ದೆಹಲಿ**
**ಏಪ್ರಿಲ್ 07, 2020**

DISCLAIMER : This is an approximate translation. The original is available in English on MEA’s website and may be referred to as the official press release.